ನಾಂದಿಪದ

# ಬಾಲ್ಯಕಾಲ ಸುಖ

ಎಲ್ಲರಿಗೂ ಅವರವರ ಬಾಲ್ಯ ಯಾವಾಗ ಬೇಕಾದರೆ ಆವಾಗ ಮೊಗೆದುಕೊಳ್ಳಬಹುದಾದ ಮಳೆಗಾಲದ ಬಾವಿಯಂತೆ. ಲೇಖಕರಿಗಂತೂ ಅವರ ಕೃತಿಗಳಿಗೆ ಅದೇ ಜೀವಜಲ. ಅನೇಕ ಲೇಖಕರು ಬಾಲ್ಯದ ದಟ್ಟ ನೆನಪುಗಳಿಗೆ, ಅದನ್ನು ಕಳೆದ ತಮ್ಮ ಹಳ್ಳಿಗೆ ತಮ್ಮ ಕೃತಿಗಳಲ್ಲಿ ಮರಳುತ್ತ ಇರುತ್ತಾರೆ. ಆಗ ಆದ ಅವಮಾನ, ಹಸಿವು, ಪ್ರೇಮ, ಹಿಂಸೆ, ಸಂತೋಷ, ಸಾಹಸ ಇವೆಲ್ಲವೂ ಅವರ ಕೃತಿಗಳಲ್ಲಿ ಪಡಿಮಿಡಿಯುತ್ತ ಇರುತ್ತವೆ. ಚಿಕ್ಕಂದಿನ ಹಸಿ ಗೋಡೆಯ ಮೇಲೆ ಮೂಡಿದ ಆಗಿನ ಪರಿಸರ, ವ್ಯಕ್ತಿಗಳು ಅವರ ಕತೆ, ಕಾದಂಬರಿಗಳ ಪಾತ್ರವಾಗುತ್ತ, ಅದರ ಬಣ್ಣ, ವಾಸನೆಯಾಗಿ ಆವರಿಸಿರುತ್ತವೆ. ಅದು ಎಲ್ಲರ ವ್ಯಕ್ತಿತ್ವವನ್ನು ರೂಪಿಸುವ ಶಕ್ತಿಶಾಲಿ ಪ್ರಭಾವ. ಬದುಕಿನ ಅವಸರದಲ್ಲೂ 'ಮರೆತೇನೆಂದರೆ ಮರೆಯಲಿ ಹೆಂಗ' ಎಂದು ಬಾಲ್ಯವನ್ನು, ಊರನ್ನು ನೆನೆಯದವರು ಇರಲಿಕ್ಕಿಲ್ಲ. ಆಗ ಕಂಡ ಜಾತ್ರೆ, ಅಲ್ಲಿ ಕೊಂಡ ಬೊಂಬೆ, ಹಕ್ಕಿಯ ಗೂಡು, ಹಸಿರು ಸೂಸುವ ಹಿತ್ತಲು, ಹುಲ್ಲಿನ ಮಾಡಿನ ಹೊಗೆ ಏಳುವ ಮನೆಗಳು, ಹೊಲ, ಸೋನೆಮಳೆ, ಕೊಟ್ಟಿಗೆ ಇವೆಲ್ಲ ವ್ಯಕ್ತಿಯ ಭಾವಕೋಶದ ಭಾಗವಾಗಿರುತ್ತವೆ.

ಕೇವಲ ಬಾಲ್ಯದ ನೆನಪುಗಳನ್ನು ಆಧರಿಸಿ ಬರೆಯುತ್ತ ಹೋದರೆ ಆ ಬರವಣಿಗೆ ತೆಳ್ಳಗಾಗುತ್ತದೆ. ಅದನ್ನು ನಂಬಿ ಬರೆದ ಸಡಿಲ ಕತೆ, ಕವಿತೆ, ಕಾದಂಬರಿಗಳನ್ನು ನಾವು ನೋಡಿದ್ದೇವೆ. ಅಂತಹ ಒಂದೆರಡು ಕೃತಿಗಳಿಗೇ ಕೆಲವು ಬರಹಗಾರರು ನಿಂತುಬಿಡುತ್ತಾರೆ. ಅದರ ದಟ್ಟ ಅನುಭವವೇ ಅವರ ಶಕ್ತಿಯೂ ಮಿತಿಯೂ ಆಗಬಹುದು. ಈಗಿನ ಮಕ್ಕಳಿಗೆ ಬಾಲ್ಯದ ಒಂದು ಮುಗ್ಧ ಜಗತ್ತು ಇದೆಯೇ ಎಂಬ ಪ್ರಶ್ನೆ ಏಳುತ್ತದೆ. ಬೆಳಿಗ್ಗೆ ಎದ್ದು ಟೈ, ಬೂಟು, ಸಮವಸ್ತ್ರ ಧರಿಸಿ ಶಾಲೆಗೆ ಹೋಗುವ, ಹೊರಜಗತ್ತನ್ನು ಕಾಣದ ಮಕ್ಕಳ ವ್ಯಕ್ತಿತ್ವವನ್ನು ಕೇವಲ ಇಂಗ್ಲಿಷ್ ಭಾಷೆ ಒಂದೇ ಪೊರೆಯಬಹುದೆ? ನಾಳೆ ಅದು ಅವರನ್ನು ಸಾಹಿತ್ಯದತ್ತ ಎಳೆಸಬಹುದೆ? ಶಾಲೆಗಳಲ್ಲಿ ಬಳಸುವ ವ್ಯಾವಹಾರಿಕ ಇಂಗ್ಲಿಷ್‌ನ ಭಾವಶೂನ್ಯ ಜಗತ್ತು ಅವರನ್ನು ಎಲ್ಲಿಗೆ ಕರೆದೊಯ್ಯಬಹುದು? ಬಾಲ್ಯವನ್ನು ಈಗಿನ ಮಕ್ಕಳು ಕಳೆದುಕೊಳ್ಳುತ್ತಿಲ್ಲ. ಪುಟ್ಟ ಕೈಗಳ ಒಂದು ನಿಲುಕಿಗೆ ಸಿಗಬಹುದಾದ ಅದನ್ನು ಬಲವಂತವಾಗಿ ಇಲ್ಲವಾಗಿಸಲಾಗುತ್ತಿದೆ.

ಮುಂದೊಂದು ದಿನ ಸಾಹಿತ್ಯವನ್ನು ಸೃಷ್ಟಿಸುವವರು ಕಡಿಮೆಯಾಗಬಹುದು. ಈಗಲೇ ಅದರ ಲಕ್ಷಣಗಳು ಕಾಣತೊಡಗಿವೆ. ಇಂಗ್ಲಿಷ್ ಕಂದಮ್ಮಗಳಿಗೆ ಕನ್ನಡದ ಹಾಡುಪಾಡು ಬೇಕಿಲ್ಲ. ಅದೂ ನೆಮ್ಮದಿಯನ್ನು ಕಾಣುವ ತಾವು, ಜೀವಜೀವಗಳನ್ನು ಪೊರೆಯುವ ತಾಣ, ನಮ್ಮ ಭಾವಜಗತ್ತನ್ನು ವಿಸ್ತರಿಸುವ, ಕೈ ಹಿಡಿದು ನುಡಿಸುವ ಸಖ ಎಂಬ ನಂಬಿಕೆ ಇಲ್ಲವಾಗುತ್ತಿದೆ. ಅದರ ದುರಂತದ ಬೀಜಗಳು ನಮ್ಮ ಜೀವನಶೈಲಿ, ಹುಸಿ ಶಿಕ್ಷಣ ಪದ್ಧತಿಯಲ್ಲಿವೆ. ನಾವಾಗಿ ತಂದುಕೊಂಡಿರುವ ಆಪತ್ತಿಗೆ ಉತ್ತರ ಕಂಡುಕೊಳ್ಳಬೇಕಾದವರು ನಾವೇ. ಇದೆಲ್ಲವೂ ಕೈಮೀರಿ ಹೋಗುತ್ತಿರುವ ಈ ಹೊತ್ತಲ್ಲಿ ಈ ಸತ್ಯವನ್ನು ನಾವೆಲ್ಲ ಮನಗಾಣಬೇಕಿದೆ.

ಈ ಸಂಚಿಕೆಯಲ್ಲಿ ನರೇಂದ್ರ ಪೈ ಅವರು ಮಾಡಿದ ಕಾದಂಬರಿಕಾರ ಕೆ.ಟಿ. ಗಟ್ಟಿ ಅವರ ಸಂದರ್ಶನವಿದೆ.

**ಸಂದೀಪ ನಾಯಕ**

